ನೂರ್ ಅಮ್ಮ ಕಿಸಕ್ಕನೆ ನಕ್ಕಳು, 'ಅವಳು ಬಂಜೆಯಾದ್ರೆ ಏನಾಯ್ತು? ಮಗನಿಗೆ ಇನ್ನೊಂದು ಮದುವೆ ಮಾಡು. ಈ ಸಲ ಚೆನ್ನಾಗಿ ದುಡ್ಡು ತಗೊ'.

ಗುಲ್ನೂರ್ ಖುಷಿಯಾಗಿ ಮನೆಗೆ ಬಂದಳು. ಮೊತಿಜಾನ್‌ಗೆ, 'ವಂಶ ಬೆಳಗೊ ಮಗು ಕೊಡದೇಯಿದ್ರೆ ಅವಳು ಬದುಕಿಯೂ ಸತ್ತಂತೆ' ಅಂದಳು. ಅವಳ ತಲೆ ತುಂಬಾ ಮಗನ ಮದುವೆ ಮಾತು ತುಂಬ್ಕೊಂಡಿತ್ತು. ಮೊತಿಜಾನ್ ಉಭಶುಭ ಅನ್ನಲಿಲ್ಲ.

ಎರಡು ದಿನ ಆದ ಮೇಲೆ ಅಬೂಲ್ ಮನೆಯಲಿದ್ದ ರಾತ್ರೀಲಿ ವಂಶ ಬೆಳಗೊ ಮಾತೆತ್ತಿದಳು ಮೊತಿಜಾನ್. ಅದನ್ನ ಕೇಳಿ ಬಹಳ ಕಿರಿಕಿರಿಯಾಯ್ತು ಅಬೂಲ್‌ಗೆ, 'ವಂಶಕ್ಕಿಷ್ಟು ಬೆಂಕಿಹಾಕ' ಅಂದ.

'ನಿಮ್ಮಮ್ಮನಿಗೆ ಬೇಕಂತೆ.'

'ಅಮ್ಮಂಗೆ ಹೇಳು...' ಮುಂದೆ ನಿಲ್ಲಿಸಿಬಿಟ್ಟ. ಅವನು ಹೇಳಿದ ಅಸಭ್ಯ ಮಾತು ಅಸ್ಪಷ್ಟವಾಗಿ ಕೇಳಿಸಿತು ಅವಳಿಗೆ. ಅವಳು ಬೇವಕೂಫ್ ಆದಳು, ಬೆಪ್ಪುತಕ್ಕಡಿಯಂತೆ ಕೂತಳು.

ಅವಳಿಗನಿಸುತ್ತೆ ಹೊಟ್ಟೆಯೊಳಗೇನೋ ಅಲುಗಾಡಿ ಅವಳ ಕರುಳಬಳ್ಳಿಯನ್ನು ಎಳೆಯುತ್ತಿದೆ ಅಂತ. ಮೈಮೇಲೆ ಕೂತಿರುವ ಅಬೂಲ್‌ನನ್ನು ಒದ್ದು ಹೊರಗಾಕಬೇಕು ಅಂದ್ಕೋತಾಳೆ. ಹೊರಗೆಲ್ಲೋ ಬುಧೇಯ ಕೂಗು ಕೇಳಿಸಿತು. ಕಾಲ ಬರೋತನಕ ಕಾಯಬೇಕು. ಲೋಕಮಾನನ ನೀಳಕಾಯ ಅವಳ ಸನಿಹ ಬಂತು, ಮುಟ್ಟಲು ಕೈಚಾಚಿದಳು. ಆ ದೇಹ ಒಂದು ಪೊಟ್ಟಣದಂತೆ ಅವಳ ಮುಷ್ಟಿಯೊಳಗೆ ಸಿಲುಕಿಕೊಂಡಿತು.

ಒಂದು ದಿನ ಮಧ್ಯಾಹ್ನ ಮೋಡಗಳು ಬಂದವು. ಗಾಳಿ ಎದ್ದಿತು. ಇದ್ದಕ್ಕಿದ್ದಂತೆ ಜೋರು ಬಿರುಗಾಳಿ. ಬುಧೇ ಇನ್ನೂ ವಾಪಸು ಬಂದಿಲ್ಲ. ಎಲ್ಲೂ ಹತ್ತಿರದಲ್ಲೂ ಇಲ್ಲ. ಹಸುಗಳ ಕೊರಳ ದನಿ ಕೇಳಿಸುತ್ತಿಲ್ಲ. ಗುಲ್ನೂರ್ ಬೆಳಗ್ಗೇನೆ ಕನ್ನಾಲ್‌ಗೆ ಹೋಗಿದ್ದಳು, ಮೈದುನನ ಮನೆಗೆ, ಸಂಜೆಯ ಹೊತ್ತಿಗೆ ಹಿಂದಿರುಗ್ತೀನಿ ಅಂತ ಹೇಳಿ. ಎರಡು ದಿನದಿಂದ ಅಬೂಲ್ ಮನೆಗೆ ಬಂದಿಲ್ಲ. ಮೊತಿಜಾನ್ ಜಗಲಿಯಲ್ಲಿ ಕಾಲು ಚಾಚಿ ಕೂತ್ಕೊಂಡು ಕೈಚೌಕಕ್ಕೆ ಕಸೂತಿ ಹಾಕ್ತಾಯಿದ್ಲು. ಇದನ್ನು ಅವಳು ಅತ್ತೆಗೆ ಕಾಣದಂತೆ ಮಾಡ್ತಾಯಿದ್ದಳು. ಏಕೆಂದರೆ, ಕೈಚೌಕವನ್ನು ಅವಳು ಲೋಕಮಾನ್‌ಗೆ ಕೊಡ್ತಾಳೆ. ಈಗಂತೂ ಅವಳಿಗೆ ಲೋಕಮಾನನೊಂದಿಗೆ ಒಂದು ರೀತಿಯ ಸ್ನೇಹ ಬೆಳೆದುಕೊಂಡಿತ್ತು. ಅವನಿಗೆ ಗೊತ್ತು, ಗುಲ್ನೂರ್ ಯಾವಾಗ ನಿದ್ದೆ ಮಾಡ್ತಾಳೆ, ಬುಧೇ ಯಾವಾಗ ಇರೋದಿಲ್ಲ, ಯಾವಾಗ ಬಿದಿರು ಮೆಳೆ ನಡುವೆ ತೂರಿ ಬರುವ ಬಿಸಿಲು ನೆಲಕ್ಕೆ ರತ್ನಗಂಬಳಿ ಹಾಸುತ್ತೆ ಅಂತ. ಆಗ ಮೊತಿಜಾನಳ ಹತ್ತಿರ ತುಂಬಾ ಸಮಯವಿರುತ್ತೆ, ಆಗ ಅವರಿಬ್ಬರು ಏಳು ಸಮುದ್ರ ದಾಟಿ, ಏಳು ಪರ್ವತ ದಾಟಿ ಹೋಗ್ತಾರೆ.

ಜೋರಾಗಿ ಬೀಸಿದ ಗಾಳಿಯಿಂದಾಗಿ ಎದ್ದ ದೂಳು ಅವಳ ಕಣ್ಣೊಳಗೆ ತುಂಬಿಕೊಂಡಿತು, ಕೂದಲೆಲ್ಲ ಕೆದರಿಕೊಂಡಿತು. ಅವಳು ಅವಳನ್ನ ಸುಧಾರಿಸಿಕೊಳ್ಳುವಷ್ಟರಲ್ಲಿ ಜೋರಾಗಿ ಓಡಿ ಬಂದ ಲೋಕಮಾನ್ ಗೇಟು ದಾಟಿ ಮೆಟ್ಟಿಲು ಹತ್ತಿ ಜಗಲಿಯಲ್ಲಿ ಬಂದು ನಿಂತ್ಕೊಂಡ.

ಅವನ ಕೈಯಲ್ಲಿ ತುಂಬಾ ಮನೆ ಸಾಮಾನಿದ್ದವು. ಅಷ್ಟೊತ್ತಿಗೆ ಸರಿಯಾಗಿ ಧಪಧಪ ಅಂತ ಮಳೆ ಬೀಳೋಕೆ ಶುರುವಾಯ್ತು. ಜೋರಾಗಿ ಗುಡುಗು ಮಿಂಚು, ಮುಸಲಧಾರೆ ಸುರಿಯತೊಡಗಿತು. ಮನೆಯೊಳಗೆ ಬಂದ ಲೋಕಮಾನ್ ಎರಡೂ ಕೈಯಿಂದ ಮೊತಿಜಾನಳನ್ನು ಎದೆಗವಚಿಕೊಂಡ. ಇದೇ ಮೊದಲ ಸಲ, ಅವಳು ಒಬ್ಬ ಪುರುಷನ ಸ್ಪರ್ಶವನ್ನು, ಉದ್ವೇಗವನ್ನು ಅನುಭವಿಸಿದಳು.

ಅವಳಿಗೆ ಗೊತ್ತಾಯ್ತು, ಅಬೂಲ್‌ಗಿಂತ ಇವನು ಬೇರೆ ತರಹ ಅಂತ.

ದಿನಗಳುರುಳಿದವು, ದಿನಗಳಂತೂ ಉರುಳಲೇಬೇಕು, ಅದೇ ದಿನದ ನಿಯಮ. ಆದರೆ ಮೊತಿಜಾನಳ ದಿನಗಳಂತೂ ಈಗ ಬೇರೆ ರೀತಿಯಲ್ಲಿ ಉರುಳತೊಡಗಿದವು. ಅವಳು ಅಮ್ಮ ಆಗ್ತಿದಾಳೆ.